# ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ ವಿಜಯಪುರ

**ದಿನಾಂಕ: 27–06–2017**

ವಿಜಯಪುರ: ಭಾರತ ದೇಶವನ್ನು ಧರ್ಮ, ಸಂಸ್ಕೃತಿ, ನೀತಿ, ತ್ಯಾಗ-ಯೋಗದ ತಳಹದಿಯ ಮೇಲೆ ಕಟ್ಟಿದ್ದಾರೆ. ಯೋಗ ಋಷಿಮುನಿಗಳು ಕೊಟ್ಟ ಅದ್ಭುತ ಕೊಡುಗೆಯಾಗಿದೆ. ಬಾಹ್ಯದೊಂದಿಗೆ ಆಂತರಿಕ ಸೌಂದರ್ಯವನ್ನು ಹೆಚ್ಚಿಸುವುದೇ ಯೋಗ ಎಂದು ಸಿಕ್ಯಾಬ್ ಮಹಿಳಾ ಮಹಾವಿದ್ಯಾಲಯದ ಪ್ರೊ.ಶಾಂತಕುಮಾರ ಗುರೂಜಿ ಹೇಳಿದರು.

ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಜ್ಞಾನಶಕ್ತಿ ಆವರಣದ ಯೋಗ ಅಧ್ಯಯನ ಕೇಂದ್ರದಲ್ಲಿ ಇತ್ತೀಚೆಗೆ ಹಮ್ಮಿಕೊಂಡಿದ್ದ 3ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಯೋಗ ಎಂದರೆ ಬರೀ ಆಸನಗಳಲ್ಲ, ಯಮ ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ ಧಾರಣ, ಧ್ಯಾನ ಸಮಾಧಿ ಇವುಗಳನ್ನೊಳಗೊಂಡಿದ್ದು, ಮಾನಸಿಕ ನೆಮ್ಮದಿಗಾಗಿ ವಿದ್ಯಾರ್ಥಿಗಳ ಏಕಾಗ್ರತೆಗಾಗಿ ಯೋಗ ಅಗತ್ಯ. ವೆಚ್ಚವಿಲ್ಲದ ವೈದ್ಯ ಯೋಗವಾಗಿದೆ. ದಿನನಿತ್ಯದಲ್ಲಿ ಆಹಾರ ಕ್ರಮ ಕೂಡಾ ಬಹಳ ಮಹತ್ವದ್ದು ಎಂದರು.

ಅಧ್ಯಕ್ಷತೆ ವಹಿಸಿದ್ದ ಮಹಿಳಾ ಕುಲಸಚಿವ ಪ್ರೊ. ಕೆ.ಪಿ. ಶ್ರೀನಾಥ ಮಾತನಾಡಿ, ಒತ್ತಡ ನಿರ್ವಹಣೆಯಲ್ಲಿ ಯೋಗ ಪ್ರಮುಖ ಪಾತ್ರ ವಹಿಸುತ್ತದೆ. ಯೋಗವನ್ನು ಯೋಗ ದಿನಾಚರಣೆಯಂದಷ್ಟೇ ಯೋಗಾಭ್ಯಾಸ ಮಾಡದೇ ದಿನವೂ ಆಚರಣೆಯಲ್ಲಿರಲಿ ಎಂದು ತಿಳಿಸಿದರು.

ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ಬೋಧಕ, ಬೋಧಕೇತರ ಮತ್ತು ಸಂಶೋಧನಾರ್ಥಿನಿಯರು ಭಾಗವಹಿಸಿದ್ದರು.

ಯೋಗ ಅಧ್ಯಯನ ಕೇಂದ್ರದ ಸಂಯೋಜಕಿ ಡಾ. ಜ್ಯೋತಿ ಉಪಾಧ್ಯೆ ಸ್ವಾಗತಿಸಿದರು. ಆನಂದ ಬಂಗಿನವರ ನಿರೂಪಿಸಿದರು. ಅತಿಥಿ ಉಪನ್ಯಾಸಕ ಡಾ. ಶ್ರೀಕಾಂತ ಚವ್ಹಾಣ ವಂದಿಸಿದರು.

ಫೋಟೊ ಕ್ಯಾಪ್ಶನ್ //

1) ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಯೋಗ ಅಧ್ಯಯನ ಕೇಂದ್ರದಿಂದ ಹಮ್ಮಿಕೊಂಡಿದ್ದ 3ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮವನ್ನು ಮಹಿಳಾ ಕುಲಸಚಿವ ಪ್ರೊ. ಕೆ.ಪಿ. ಶ್ರೀನಾಥ ಉದ್ಘಾಟಿಸಿದರು. ಚಿತ್ರದಲ್ಲಿ ಪ್ರೊ.ಶಾಂತಕುಮಾರ ಗುರೂಜಿ ಹಾಗೂ ಕೇಂದ್ರದ ಸಂಯೋಜಕಿ ಡಾ. ಜ್ಯೋತಿ ಉಪಾಧ್ಯೆ ಇತರರು ಇದ್ದಾರೆ.

2) ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಯೋಗ ಅಧ್ಯಯನ ಕೇಂದ್ರದಿಂದ ಹಮ್ಮಿಕೊಂಡಿದ್ದ 3ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ಬೋಧಕ, ಬೋಧಕೇತರ ಮತ್ತು ಸಂಶೋಧನಾರ್ಥಿನಿಯರು ಯೋಗಾಭ್ಯಾಸ ಮಾಡುತ್ತಿರುವುದು.



